# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ.04/2024

**ದೋ.ಸಾ. : 13 ಪ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ಸಾನಿತ್ಯ ಲೋಕೇಶ ನಾಯ್ಕ |
| ತಂದೆಯ ಹೆಸರು | : | ಲೋಕೇಶ ಸುಬ್ಬಾ ನಾಯ್ಕ |
| ವಯಸ್ಸು | : | 11 ವರ್ಷ |
| ಕೆಲಸ | : | ವಿದ್ಯಾರ್ಥಿನಿ |
| ವಾಸ | : | ಮುರ್ಡೇಶ್ವರ, ತಾಃ ಭಟ್ಕಳ |

**ದಿನಾಂಕಃ 14-03-2025**

ಸಾಕ್ಷಿಯು 11 ವರ್ಷದವಳಾಗಿರುವ ಕಾರಣ, ಸಾಕ್ಷಿಯ ವಿಚಾರಣೆ ಮಾಡುವ ಮೊದಲು, ಆಕಗೆ ಸಾಕ್ಷ್ಯ ನೀಡುವ ಸಾಮರ್ಥ್ಯ ಇರುವ ಬಗ್ಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಾಯಿತು.

1. ನಿನ್ನ ತಾಯಿಯ ಹೆಸರೇನು?
ಉತ್ತರಃ ನಂದಿನಿ

2. ನಿನ್ನ ಊರು ಯಾವುದು?
ಉತ್ತರಃ ನಾಡೋವರ ಕೇರಿ, ಮುರ್ಡೇಶ್ವರ

3. ನೀನು ಎಷ್ಟನೇ ತರಗತಿ ಓದುತ್ತಿದ್ದೀಯಾ?
ಉತ್ತರಃ 5 ನೇ ತರಗತಿ

4. ನಿನ್ನ ಶಾಲೆಯ ಹೆಸರೇನು?
ಉತ್ತರಃ ಆರ್.ಎನ್. ಎಸ್ ಶಾಲೆ, ಮುರ್ಡೇಶ್ವರ

5. ನಿನ್ನ ಶಾಲಾ ಟೀಚರ್ ಹೆಸರೇನು?
ಉತ್ತರಃ ದೀಪಾ ನಾಯ್ಕ

6.ಈ ದಿನ ನೀನು ಎಲ್ಲಿಗೆ ಬಂದಿರುತ್ತೀಯಾ?
ಉತ್ತರಃ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ

7. ನೀನು ಈ ದಿನ ಯಾಕೆ ನ್ಯಾಯಾಲಯಕ್ಕೆ ಬಂದಿರುತ್ತೀಯಾ?
ಉತ್ತರಃ ಸಾಕ್ಷಿ ನುಡಿಯಲು ಬಂದಿರುತ್ತೇನೆ.

8.ನ್ಯಾಯಾಲಯದಲ್ಲಿ ಕಪ್ಪು ಕೋರ್ಟ್ ನ್ನು ಧರಿಸಿದವರು ಯಾರು?
ಉತ್ತರಃ ವಕೀಲರು

9.ನ್ಯಾಯಾಲಯದ ಗಡಿಯಾರ ತೋರಿಸಿ ಈಗ ಎಷ್ಟು ಗಂಟೆ ಆಗಿದೆ ಎಂದು ಪ್ರಶ್ನೆ ಕೇಳಲಾಯಿತು.
ಉತ್ತರಃ ಈಗ ಮದ್ಯಾಹ್ನ 01-00 ಗಂಟೆ ಆಗಿರುತ್ತದೆ.

(ಸಾಕ್ಷಿಯು ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಸಾಕ್ಷ್ಯ ನುಡಿಯುವ ಸಾಮರ್ಥ್ಯ ಇದೆ ಎಂದು ಅಭಿಪ್ರಾಯಿಸಿರುತ್ತೇನೆ)

**ದಿನಾಂಕಃ 14-03-2025 ರಂದು ಸಾಕ್ಷಿಯ ವಿಚಾರಣೆ ಮಾಡಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ನಂದಿನಿ ನನ್ನ ತಾಯಿ. ಈಗ ನ್ಯಾಯಾಲಯದ ಟಿ.ವಿ ಯಲ್ಲಿ ಕಾಣುತ್ತಿರುವವರು ನನ್ನ ತಂದೆ. ನನ್ನ ತಂದೆ-ತಾಯಿಗೆ ನಾವು ಇಬ್ಬರು ಮಕ್ಕಳು, ನಾನು ಮತ್ತು ನನ್ನ ಅಣ್ಣ ಋತ್ವಿಕ. ಚಾಸಾ-9 ಕೃಷ್ಣ ಕುಮಾರ ನನ್ನ ತಾಯಿಯ ತಮ್ಮ, ಚಾಸಾ-14 ಲಕ್ಷ್ಮಿ ದೇವಿ ನನ್ನ ತಾಯಿಯ ದೊಡ್ಡಮ್ಮ. ಚಾಸಾ-1 ರಾಮದಾಸ, ಚಾಸಾ-10 ಜಯಂತಿ, ಚಾಸಾ-11 ರಾಜೇಶ್ವರಿ, ಚಾಸಾ-12 ಹೇಮಲತಾ ರವರು ನನಗೆ ಗೊತ್ತಿಲ್ಲ. ಒಂದು ವರ್ಷದ ಹಿಂದೆ ನನ್ನ ತಾಯಿ ಮೃತಪಟ್ಟಿರುತ್ತಾಳೆ. ಒಂದು ವರ್ಷದ ಹಿಂದೆ ನಾನು, ನನ್ನ ತಂದೆ-ತಾಯಿ ಹಾಗೂ ನನ್ನ ಅಣ್ಣ ಮುರ್ಡೇಶ್ವರದ ಪಕ್ಕದಲ್ಲಿ ಒಂದು ಬಾಡಿಗೆ ಮನೆಗೆ ವಾಸಕ್ಕೆ ಹೋಗಿದ್ದೆವು. ನನ್ನ ತಾಯಿ ಮನೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದಳು ಹಾಗೂ ನನ್ನ ತಂದೆ ಶಿಲ್ಪಿ ಕೆಲಸಕ್ಕೆ ಹೋಗುತ್ತಿದ್ದರು. 2023 ನೇ ಇಸ್ವಿಯಲ್ಲಿ ನಾನು 4 ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದು, ಪ್ರತಿದಿನ ಬೆಳಿಗ್ಗೆ 07-00 ಗಂಟೆಗೆ ಶಾಲೆಗೆ ಹೋಗುತ್ತಿದ್ದೆ ಹಾಗೂ ಮದ್ಯಾಹ್ನದ ಸಮಯದಲ್ಲಿ ಶಾಲೆಯಲ್ಲಿಯೇ ಊಟ ಮಾಡುತ್ತಿದ್ದೆ. ಶಾಲೆಯಿಂದ ಬಂದ ನಂತರ ಟ್ಯೂಷನ್ ಮುಗಿಸಿ, ಮನೆಗೆ ಬಂದು, ಊಟ ಮಾಡಿ, ಮಲಗುತ್ತಿದ್ದೆ.

2. ನಾವು ಬಾಡಿಗೆಗೆ ಹೋಗಿದ್ದ ಮನೆಯ ಅಕ್ಕ-ಪಕ್ಕದಲ್ಲಿ 2-3 ಮನೆಗಳು ಇದ್ದು, ಅವುಗಳಲ್ಲಿ ಜನರು ವಾಸ ಮಾಡುತ್ತಿದ್ದರು, ಆದರೆ ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ. ಘಟನೆ ನಡೆದ ಮನೆಗೆ ಬಾಡಿಗೆಗೆ ಹೊಸದಾಗಿ ಹೋಗಿ 3 ದಿನಗಳಾಗಿದ್ದವು. ದಿಃ 17-10-2023 ರಂದು ನನ್ನ ಅಣ್ಣ ನನ್ನ ಅಜ್ಜಿ ಮನೆಗೆ ಹೋಗಿದ್ದ ಹಾಗೂ ನಾನು ಆ ದಿನ

ಸಂಜೆ 06-00 ಗಂಟೆಗೆ ಟ್ಯೂಷನ್ ಮುಗಿಸಿ, ಮನೆಗೆ ಬಂದಾಗ, ಅಮ್ಮ ಊಟ ನೀಡಿದ್ದು, ನಾನು ಊಟ ಮಾಡಿದೆ. ಅಪ್ಪ ಆ ದಿನ ಕೆಲಸಕ್ಕೆ ಹೋಗಿ ಮನೆಗೆ ಬಂದಿದ್ದರು, ಆ ನಂತರ ನಾನು ಮಲಗಿಕೊಂಡೆ, ಸ್ವಲ್ಪ ಸಮಯದ ನಂತರ ಒಬ್ಬರು ಆಂಟಿ ಬಂದು, ನನ್ನನ್ನು ಎಚ್ಚರಿಸಿದರು, ಆಗ ಕತ್ತಲೆ ಇದ್ದು, ಮನೆಯಲ್ಲಿ ಗಡಿಯಾರ ಇಲ್ಲದ ಕಾರಣ ಸಮಯ ನನಗೆ ಗೊತ್ತಾಗಲಿಲ್ಲ, ಆದರೆ ಮನೆಯ ಮುಂದೆ ಬಹಳಷ್ಟು ಜನರು ಸೇರಿದ್ದರು. ಆ ನಂತರ ನನ್ನ ತಂದೆಯ ಚಿಕ್ಕಪ್ಪನಾದ ಅನಂತ ಎನ್ನುವವರು ಬಂದು, ನನ್ನನ್ನು ಅಜ್ಜಿಯ ಮನೆಗೆ ಕರೆದುಕೊಂಡು ಹೋದರು.

3. ಮರು ದಿನ ದಿಃ 18-10-2023 ರಂದು ನಮ್ಮ ಅಜ್ಜಿಯ ಮನೆಯಲ್ಲಿ ನಾನು ಹಾಗೂ ನನ್ನ ಅಣ್ಣ ಇದ್ದಾಗ, ನನ್ನ ತಂದೆಯ ಚಿಕ್ಕಪ್ಪನಾದ ಅನಂತ ರವರ ಹೆಂಡತಿಯಾದ ಗೀತಾ ರವರು ಬಂದು, ನಮ್ಮ ಅಮ್ಮ ಮೃತಪಟ್ಟಿರುತ್ತಾರೆ ಹಾಗೂ ಅಪ್ಪ ಕೆಲಸಕ್ಕೆ ಹೋಗಿದ್ದಾರೆ ಎಂದು ಹೇಳಿರುತ್ತಾರೆ. ಪೊಲೀಸರು ನನ್ನ ಬಳಿ ಯಾವುದೇ ವಿಚಾರಣೆ ಮಾಡಿಲ್ಲ ಹಾಗೂ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಪೊಲೀಸರು ನನ್ನನ್ನು ಭಟ್ಕಳ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದು, ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ, ಅದರಲ್ಲಿ ತನ್ನ ತಾಯಿಯ ಶವವನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಪೋಟೋದಲ್ಲಿ ರಕ್ತ ಕಾಣುತ್ತಿದೆ ಎಂದು ಹೇಳಿರುತ್ತಾರೆ. ಆದ್ದರಿಂದ ಸದರಿ ಪೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

4. ನಾವು ಬಾಡಿಗೆಗೆ ಹೋಗಿದ್ದ ಮನೆಯು ತೇರಿನಮಕ್ಕಿಯಲ್ಲಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ನಮ್ಮ ಅಪ್ಪ ನನ್ನ ಅಮ್ಮನ ಹತ್ತಿರ ಯಾವಾಗಲೂ ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 17-10-2023 ರಂದು ಸಂಜೆ ನಾನು ಮನೆಯ ಹೊರಗೆ ಆಟ ಆಡುತ್ತಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಅಪ್ಪ ನನ್ನ ಅಮ್ಮನಿಗೆ ಮನೆಯ ಒಳಗೆ ಜೋರಾಗಿ ಬೈಯುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸ್ವಲ್ಪ ಸಮಯದ ನಂತರ ನನ್ನ ಅಮ್ಮ

ಜೋರಾಗಿ ಕೂಗಿಕೊಂಡು ಮನೆಯ ಹೊರಗೆ ಓಡಿ ಬಂದಳು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಮ್ಮ ಮನೆಯಿದ ಹೊರಗೆ ಓಡಿ ಬರುವಾಗ, ಅವಳ ಹಿಂದಿನಿಂದ ನನ್ನ ಅಪ್ಪ ಒಂದು ಕತ್ತಿಯನ್ನು ಹಿಡಿದುಕೊಂಡು ಅಮ್ಮನನ್ನು ಓಡಿಸಿಕೊಂಡು ಬಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ನಾನು ನೋಡಿ ಕೂಗಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆಗ ನಮ್ಮ ಪಕ್ಕದ ಮನೆಯ ಚಾಸಾ–10 ಜಯಂತಿ ರವರು ಬಂದು, ನನ್ನನ್ನು ಹಿಡಿದುಕೊಂಡರು ಎಂದರೆ ಸರಿಯಲ್ಲ. ನಂತರ ನನ್ನ ಅಪ್ಪನು ಓಡಿ ಹೋಗುತ್ತಿದ್ದ ನನ್ನ ಅಮ್ಮನಿಗೆ, ಓನರ್ ಮನೆಯ ಪಕ್ಕದ ರಸ್ತೆಯಲ್ಲಿ ಅಡ್ಡಗಟ್ಟಿ ಕತ್ತಿಯಿಂದ ಕಡಿದಿರುತ್ತಾನೆ ಎಂದರೆ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಮ್ಮ ಮನೆಯ ಓನರ್ ಚಾಸಾ–1 ರಾಮದಾಸ ರವರು ಅಲ್ಲಿಗೆ ಬಂದಿದ್ದು, ನನ್ನ ಅಪ್ಪ ತನ್ನ ಕೈಯಲ್ಲಿ ಕತ್ತಿ ಹಿಡಿದುಕೊಂಡು ಕಂಪೌಂಡ್ ಹಾರಿ ಓಡಿ ಹೋದನು ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ–1 ರವರು ಪೊಲೀಸರಿಗೆ ಹಾಗೂ ಅಂಬ್ಯುಲೇನ್ಸ ನವರಿಗೆ ಕರೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ಆ ನಂತರ ಚಾಸಾ–1 ರವರು ನನ್ನ ತಂದೆಯ ವಿರುದ್ದ ನನ್ನ ತಾಯಿಯನ್ನು ಕತ್ತಿಯಿಂದ ಕಡಿದ ಬಗ್ಗೆ ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನೆಯನ್ನು ನೋಡಿದ ಬಗ್ಗೆ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ–3 ಎಂದು ಗುರುತಿಸಲಾಯಿತು. ನನ್ನ ತಂದೆ ನನ್ನ ತಾಯಿಯನ್ನು ಕತ್ತಿಯಿಂದ ಕೊಲೆ ಮಾಡಿದ್ದನ್ನು ನೋಡಿದ್ದರೂ ಸಹ ನನ್ನ ತಂದೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಕೆ.ಎಂ ವಕೀಲರಿಂದ</u>**

6. ನನ್ನ ತಂದೆಯವರು ನನ್ನನ್ನು ಹಾಗೂ ನನ್ನ ಅಣ್ಣನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅದೇ ರೀತಿ ನನ್ನ ತಂದೆ ನನ್ನ ತಾಯಿಯನ್ನು ಸಹ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಭಟ್ಕಳ ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ ಪೊಲೀಸರು ನನಗೆ ಇದೇ ರೀತಿ ಹೇಳಬೇಕೆಂದು ಹೇಳಿರುತ್ತಾರೆ. ಅವರು ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಹೇಳಿಕೆಯನ್ನು ಹೇಳಿರುತ್ತೇನೆ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ